ಶ್ರೀ ಆರ್.ವಿ. ದೇಶಪಾಂಡೆ (ವೈದ್ಯಕೀಯ ಶಿಕ್ಷಣ ಸಚಿವರು)

ಅ) ಸರ್ಕಾರವು ಪ್ರತಿ ಶೈಕ್ಷಣಿಕ ವರ್ಷದಲ್ಲಿ ಖಾಸಗಿ ವೈದ್ಯಕೀಯ ಕಾಲೇಜುಗಳ ನಡುವೆ ಪರಸ್ಪರ ಒಡಂಬಡಿಕೆ ಪ್ರಕಾರ ಸರ್ಕಾರಿ ಕೋಟಾದ ವೈದ್ಯಕೀಯ & ದಂತ ವೈದ್ಯಕೀಯ ಸ್ನಾತಕ ಹಾಗೂ ಸ್ನಾತಕೋತ್ತರ ಸೀಟುಗಳನ್ನು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸಿಇಟಿ ಮುಖಾಂತರ ಸೀಟು ಹಂಚಿಕೆ ಮಾಡಲಾಗಿದ್ದು, ಯಾವುದೇ ರೀತಿಯ ಗೊಂದಲ ನಿರ್ಮಾಣವಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ (ಪ್ರವೇಶ, ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ, 2006 ರ ಕಾಯ್ದೆಯನ್ನು 2015–16ನೇ ಸಾಲಿನಿಂದ ಜಾರಿಗೆ ತರಲು ಉದ್ದೇಶಿಸಲಾಗಿದೆ.

ಈ) ಈ ಕಾಯ್ದೆಯಡಿ ಜನರಲ್ ಪೂಲ್‌ನಲ್ಲಿ ಬರುವ ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಹಿತರಕ್ಷಣೆ ಕಾಯ್ದುಕೊಳ್ಳಲು ಸರ್ಕಾರವು ಎಲ್ಲಾ ಕ್ರಮಗಳನ್ನು ಕೈಗೊಂಡಿದೆ.

ಬಸ್ ಪ್ರಯಾಣದ ದರ

1551(2042); ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)

ಅ) ಕೇಂದ್ರ ಸರ್ಕಾರ ಗಣನೀಯ ಪ್ರಮಾಣದಲ್ಲಿ ಡೀಸೆಲ್ ಹಾಗೂ ಪೆಟ್ರೋಲ್ ಬೆಲೆ ಇಳಿಸಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಬಸ್ ದರ ಯಾವ ಪ್ರಮಾಣದಲ್ಲಿ ಇಳಿಸಲಾಗಿದೆ; ಹಾಗೆಯೇ ಬೆಲೆ ಇಳಿಕೆಯಿಂದ ವಿದ್ಯಾರ್ಥಿಗಳ ಬಸ್ ಪಾಸ್‌ನಲ್ಲಿ ರಿಯಾಯಿತಿ ನೀಡಲಾಗಿದೆಯೇ?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ಹೌದು

ಆ) ಕರಾರಸಾ, ವಾಕರಸಾ ಮತ್ತು ಈಕರಸಾ ಸಂಸ್ಥೆಗಳಿಂದ ಕಾರ್ಯಚರಣೆ ಮಾಡುತ್ತಿರುವ ಸಾಮಾನ್ಯ, ವೇಗದೂತ ಮತ್ತು ನಗರ/ಉಪನಗರ ಸಾರಿಗೆಗಳ ಬಸ್ ಪ್ರಯಾಣ ದರಗಳನ್ನು ದಿನಾಂಕ:10–01–2015ರಿಂದ ಜಾರಿಗೆ ಬರುವಂತೆ ಈ ಕೆಳಕಂಡ ಹಂತಗಳಲ್ಲಿ ಇಳಿಕೆ ಮಾಡಲಾಗಿದೆ.

ಸಾಮಾನ್ಯ ವರ್ಗದ ಸಾರಿಗೆಗಳು.

ಉಪಹಂತ 2(2S) ರಲ್ಲಿ ರೂ. 2/–

ಹಂತ–4, 6, 7, 8, 12, 13, 14, 15, 16 & 17ರಲ್ಲಿ ತಲಾ ರೂ. 1/–

ವೇಗದೂತ ಸಾರಿಗೆಗಳು.

ಹಂತ–2, 5, 7, 11, 13 & 14 ರಲ್ಲಿ ರೂ. 1/–

ಹಂತ–12, 18, 19, 20, 21, 22, 23, 26, 27 & 34ರಲ್ಲಿ ರೂ. 2/–

ಹಂತ–17, 24, 25, 28, 29, 30, 32, 33, 35, 41 & 46ರಲ್ಲಿ ರೂ. 3/–

ಹಂತ–31, 36, 38, 39, 40, 42, 44, 45, 47, 50, 51, 52, 54 & 58 ರಲ್ಲಿ ರೂ. 4/–

ಹಂತ–37, 43, 48, 49, 53, 56, 57, 59, 60, 62, 63, 64, 65, 66, 70, 71 & 76ರಲ್ಲಿ ರೂ. 5/–

ಹಂತ–55, 61, 68, 69, 72, 74, 75, 77, 78, 82 & 83ರಲ್ಲಿ ರೂ. 6/–

ಹಂತ–67, 73, 80, 81, 84, 86, 87, 88, 89, 90, 94, 95, 100 & 106ರಲ್ಲಿ ರೂ. 7/–

ಹಂತ–79, 85, 92, 93, 96, 97, 98, 99, 101, 102, 107 & 118ರಲ್ಲಿ ರೂ. 8/–

ಹಂತ–91, 104, 105, 108, 110, 111, 112, 113 & 119ರಲ್ಲಿ ರೂ. 9/–

ಹಂತ–103, 109, 114, 116, 117 & 120ರಲ್ಲಿ ರೂ. 10/–

ಹಂತ–115ರಲ್ಲಿ ರೂ. 11/–

ನಗರ–ಉಪನಗರ ಸಾರಿಗೆಗಳು.

ಹಂತ–1, 2 & 13ರಲ್ಲಿ ರೂ. 1/–

ಹಂತ–3ರಲ್ಲಿ ರೂ. 2/–

ಕರಾರಸಾನಿಗಮ, ವಾಕರಸಾಸಂಸ್ಥೆ ಮತ್ತು ಈಕರಾಸಾಸಂಸ್ಥೆಗಳಲ್ಲಿ 2011–12ನೇ ಸಾಲಿನಲ್ಲಿ ಜಾರಿಯಲ್ಲಿದ್ದ ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸ್ ದರವನ್ನು 2012–13ನೇ ಸಾಲಿಗೆ ಕಡಿಮೆ ಮಾಡಲಾಗಿದ್ದು, ಈ ರೀತಿ ಕಡಿಮೆ ಮಾಡಲಾದ ದರವನ್ನು ದಿನಾಂಕ: **30/09/2012**ರಲ್ಲಿ **ಶೇ. 12ರಷ್ಟು, ದಿನಾಂಕ: 16/06/2013**ರಲ್ಲಿ **ಶೇ. 10.5ರಷ್ಟು** ಮತ್ತು **ದಿನಾಂಕ: 04/05/2014**ರಂದು **ಶೇ. 7.96ರಷ್ಟು ಪ್ರಯಾಣ ದರ ಹೆಚ್ಚಳವಾದರೂ ಸಹ ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸ್ ದರವನ್ನು ಹೆಚ್ಚಿಸಿರುವುದಿಲ್ಲ.** ಆದುದರಿಂದ ಪ್ರಯಾಣ ದರ ಇಳಿಕೆಯಿಂದ ವಿದ್ಯಾರ್ಥಿಗಳ ಬಸ್ ಪಾಸ್‌ನಲ್ಲಿ ರಿಯಾಯಿತಿ ನೀಡುವುದು ಕಷ್ಟಸಾಧ್ಯವಾಗಿರುತ್ತದೆ.

ಬೆಂಮಸಾಸಂಸ್ಥೆ

ಭಾರತ ಸರ್ಕಾರವು ಇಂಧನ ದರಗಳನ್ನು ಇಳಿಕೆ ಮಾಡಿರುವುದರಿಂದ ಸಂಸ್ಥೆಗೆ ಇಂಧನ ವೆಚ್ಚದಲ್ಲಿ ಉಳಿತಾಯವಾಗುವ ಮೊತ್ತವನ್ನು ಸಾರ್ವಜನಿಕರಿಗೆ ಹಂಚುವ ಹಿನ್ನೆಲೆಯಲ್ಲಿ ಸಂಸ್ಥೆಯು ತನ್ನ 25 ಟಿಕೆಟ್ ಹಂತಗಳಲ್ಲಿ ಈ ಕೆಳಗಿನ 10 ಹಂತಗಳ ಟಿಕೆಟ್ ದರಗಳನ್ನು ದಿನಾಂಕ 09/10–01–2015ರ ಮಧ್ಯರಾತ್ರಿಯಿಂದ ಅನ್ವಯವಾಗುವಂತೆ ಕಡಿಮೆಗೊಳಿಸಿರುತ್ತದೆ.

ಹಂತ ಸಂಖ್ಯೆ: 1, 9, 12, 13, 16, 17, 18, 19, 22 ಮತ್ತು 23 ಹಂತಗಳಲ್ಲಿ ಕ್ರಮವಾಗಿ ಶೇ. 16.67, ಶೇ. 4.35, ಶೇ. 4.0, ಶೇ. 4.0, ಶೇ. 3.85, ಶೇ. 3.85, ಶೇ. 3.85, ಶೇ. 3.70, ಶೇ. 3.33 ಹಾಗೂ ಶೇ. 3.33 ರಷ್ಟು ದರಗಳನ್ನು ಕಡಿಮೆಗೊಳಿಸಲಾಗಿದೆ.

ಅತಿ ಹೆಚ್ಚು ಪ್ರಯಾಣಿಸುವ ಬಡ ಹಾಗೂ ಮಧ್ಯಮ ವರ್ಗದ ಜನತೆಯ ಅನುಕೂಲಕ್ಕಾಗಿ ಸಂಸ್ಥೆಯು ಮೊದಲನೇ ಹಂತದಲ್ಲಿ ಶೇ. 16.67 ರಷ್ಟು ಪ್ರಮಾಣದಲ್ಲಿ ಪ್ರಯಾಣದರವನ್ನು ಕಡಿಮೆಗೊಳಿಸಿರುತ್ತದೆ.

ಸಂಸ್ಥೆಯು 2011–12ನೇ ಸಾಲಿನಲ್ಲಿ ಜಾರಿಯಲ್ಲಿದ್ದ ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸ್ ದರವನ್ನು 2012–13ನೇ ಸಾಲಿನಲ್ಲಿ ಕಡಿಮೆ ಮಾಡಲಾಗಿರುತ್ತದೆ. ಆದರೆ, ದಿನಾಂಕ:30.09.2012 ರಲ್ಲಿ ಶೇ. 10.1 ರಷ್ಟು, ದಿನಾಂಕ 16.06.2013 ರಲ್ಲಿ ಶೇ. 14.00 ರಷ್ಟು ಮತ್ತು ದಿನಾಂಕ 25.04.2014 ರಂದು ಶೇ. 15.0 ರಷ್ಟು ಬಸ್ ದರ ಹೆಚ್ಚಳವಾದರೂ ಸಹ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅದಕ್ಕನುಗುಣವಾಗಿ ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸ್ ದರವನ್ನು ಹೆಚ್ಚಿಸಿರುವುದಿಲ್ಲ. ಆದುದರಿಂದ ಪ್ರಯಾಣ ದರ ಇಳಿಕೆಯ ಕಾರಣದಿಂದಾಗಿ ವಿದ್ಯಾರ್ಥಿಗಳ ಬಸ್ ಪಾಸ್‌ನಲ್ಲಿ ರಿಯಾಯಿತಿ ನೀಡಿರುವುದಿಲ್ಲ.